## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು 560002

ಸಂಖ್ಯೆ: ಆ/ಪಿಎಸ್‌ಆರ್/ (6) /2015-16 ದಿನಾಂಕ: 05-02-2016

## ಸಾರ್ವಜನಿಕ ಪ್ರಕಟಣೆ

### ಸಾರ್ವಜನಿಕರು ಕಡ್ಡಾಯವಾಗಿ ಮೂಲದಲ್ಲಿಯೇ ಘನತ್ಯಾಜ್ಯ ವಿಂಗಡಣೆ ಮಾಡುವ ಕುರಿತು.

***

ಬೆಂಗಳೂರು ನಗರವು ಪ್ರತಿದಿನ ಸುಮಾರು 3500 ಟನ್ ಘನತ್ಯಾಜ್ಯವನ್ನು ಉತ್ಪಾದಿಸುತ್ತಿದ್ದು, ತ್ಯಾಜ್ಯದ ಸಂಗ್ರಹಣೆ, ಬೀದಿ ಗುಡಿಸುವಿಕೆ, ಸಾಗಾಣಿಕೆ, ಸಂಸ್ಕರಣೆ ಹಾಗೂ ವಿಲೇವಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪೌರ ಘನತ್ಯಾಜ್ಯ ನಿಯಮ 2000ರ ಅಡಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ಆದರೆ ಮೂಲದಲ್ಲೇ ತ್ಯಾಜ್ಯ ವಿಂಗಡಣೆಗೆ ಮಾಡದೇ ಹಿನ್ನಲೆಯಲ್ಲಿ ತ್ಯಾಜ್ಯ ಘಟಕಗಳಿಗೆ ಮಿಶ್ರಿತ ತ್ಯಾಜ್ಯ ವಿಲೇವಾರಿಗೊಂಡು ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಿದ ಕಾರಣ ಸುತ್ತಮುತ್ತಲಿನ ಗ್ರಾಮಸ್ಥರ ಪ್ರತಿಭಟನೆಯಿಂದ 2012ನೇ ಸಾಲಿನಲ್ಲಿ ನಗರದ ಎಲ್ಲೆಡೆ ತ್ಯಾಜ್ಯ ಅರದಿ ಪರಿಸ್ಥಿತಿ ಉಲ್ಬಣಗೊಂಡಿತ್ತು, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯದ ನಿರ್ವಹಣೆಯು ಅತ್ಯಂತ ಜಟಿಲವಾಗಿದ್ದು, ಮಿಶ್ರಿತ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುವುದು ಅತ್ಯಂತ ಕಷ್ಟಕರವಾಗಿರುವುದರಿಂದ ಪಾಲಿಕೆಯು ಪ್ರಮುಖವಾಗಿ ತ್ಯಾಜ್ಯ ವಿಂಗಡಣೆಗೆ ಹೆಚ್ಚು ಗಮನ ಹರಿಸಲಾಗಿ ಸಾರ್ವಜನಿಕರಿಗೆ ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಮಾಡಲು ಸೂಚಿಸಲಾಗಿ ಹಲವಾರು ಅರಿವು ಮೂಡಿಸುವ ಕಾರ್ಯಗಳನ್ನು ಈಗಾಗಲೆ ಕೈಗೊಳ್ಳಲಾಗಿರುತ್ತದೆ.

ವಿಂಗಡಿಸಿದ ಹಸಿ ಮತ್ತು ಒಣತ್ಯಾಜ್ಯವನ್ನು ಸಂಸ್ಕರಿಸಲು/ಪುನರ್‌ಬಳಸಲು ಒತ್ತು ನೀಡಲು ಪಾಲಿಕೆ ವ್ಯಾಪ್ತಿಯಲ್ಲಿ 13 ಬಯೋಮಿಥನೈಜೇಶನ್ ಘಟಕಗಳನ್ನು ಮತ್ತು ಎಲ್ಲಾ ವಾರ್ಡ್‌ಗಳಲ್ಲಿ ಕನಿಷ್ಠ ಒಂದೊಂದು ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳಂತೆ ಒಟ್ಟು 189 ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

ಪ್ರಸ್ತುತ ಪಾಲಿಕೆಯು ಮೆ॥ ಟೆರ್ರಾ-ಫಾರ್ಮಾ, ಮೆ॥ ಎಂ.ಎಸ್.ಜಿ.ಪಿ. ಸಂಸ್ಕರಣಾ ಘಟಕಗಳ ಹೊರತು ಪಡಿಸಿ ಕೆ.ಸಿ.ಡಿ.ಸಿ. ಮಾವಳ್ಳಿಪುರ ಮತ್ತು ಹೊಸದಾಗಿ ಸ್ಥಾಪಿಸಲಾಗಿರುವ 6 ಘಟಕಗಳಿಗೆ ಕಡ್ಡಾಯವಾಗಿ ವಿಂಗಡಿಸಿದ ಹಸಿ/ಒಣತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗಿರುತ್ತದೆ. ಇದರಿಂದಾಗಿ ವಾರ್ಡಿನಲ್ಲಿ ಉತ್ಪಾದನೆ ಆಗುವ ತ್ಯಾಜ್ಯವನ್ನು ವಿಂಗಡಣೆ ಮಾಡಿಯೇ ವಿಲೇವಾರಿ ಮಾಡುವ ಅವಶ್ಯಕತೆ ಇರುತ್ತದೆ.

ಘನತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಸಂಗ್ರಹಿಸಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವ್ಯವಸ್ಥಿತವಾಗಿ ನಿರ್ವಹಣೆ ಮಾಡಿದಲ್ಲಿ ಮಾತ್ರ ತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಬಗೆಹರಿಸಬಹುದಾಗಿರುವುದರಿಂದ ತ್ಯಾಜ್ಯ ವಿಂಗಡಣೆಗೆ ಇನ್ನು ಹೆಚ್ಚಿನ ಆದ್ಯತೆ ನೀಡುವ ಅವಶ್ಯಕತೆಯಿದ್ದು, ಸಾರ್ವಜನಿಕರು ಮನೆಗಳು ಮತ್ತು ಎಲ್ಲಾ ವಾಣಿಜ್ಯ ಸಂಕೀರ್ಣಗಳು ಮೂಲದಲ್ಲಿಯೇ ಹಸಿ, ಒಣ ಮತ್ತು ಮನೆಗಳಿಂದ ಉತ್ಪತ್ತಿಯಾಗುವ ಹಾನಿಕಾರಕ (ಜೈವಿಕ, ಸ್ಯಾನಿಟರಿ) ತ್ಯಾಜ್ಯಗಳನ್ನಾಗಿ ವಿಂಗಡಣೆಯನ್ನು ಕಡ್ಡಾಯವಾಗಿ ಮಾಡಬೇಕಾಗಿರುತ್ತದೆ.

| ಹಸಿತ್ಯಾಜ್ಯ | ಒಣತ್ಯಾಜ್ಯ | ಮನೆಯ ಹಾನಿಕಾರಕ ತ್ಯಾಜ್ಯ (ಜೈವಿಕ ಸ್ಯಾನಿಟರಿ ತ್ಯಾಜ್ಯ) |
| --- | --- | --- |
| ತರಕಾರಿಗಳು, ಹಣ್ಣುಗಳು, ಹಣ್ಣಿನ ಸಿಪ್ಪೆಗಳು, ಟೀ ಸೊಪ್ಪು, ಕಾಫಿ ಪುಡಿ, ಹೂಗಳು, ಬೆಂಕಿ ಕಡ್ಡಿ, ಕೂದಲು, ಬೇಡವಾದ ಆಹಾರ, ಕಾಳುಗಳು ಮತ್ತು ಇತರೇ ಕರಗುವಂತಹ ತ್ಯಾಜ್ಯಗಳು | **ಪ್ಲಾಸ್ಟಿಕ್**: ಬ್ಯಾಗ್‌ಗಳು, ಗೊಂಬೆಗಳು, ಸೀಸಗಳು, ಹಾಲಿನ ಕವರ್‌ಗಳು.<br>**ಪೇಪರ್**: ಕಾಟ್ಸನ್‌ಬಾಕ್ಸ್‌ಗಳು, ಪ್ಲೇಟ್, ದಿನಪತ್ರಿಕೆ, ಪ್ಯಾಕಿಂಗ್ ವಸ್ತುಗಳು.<br>**ಮೆಟಲ್**: ಕ್ಯಾನ್‌ಗಳು, ಸೀಸದ ಮುಚ್ಚುಳಗಳು, ಟೆಟ್ರಾಪ್ಯಾಕ್<br>**ಇತರೆ**: ಥರ್ಮೋಕೋಲ್ ಸ್ಟೈರೋಫಾಮ್, ಬ್ಯಾಟರಿಗಳು, ಬಲ್ಬುಗಳು, ಟ್ಯೂಬ್‌ಲೈಟ್ಸ್, ಸಿ.ಡಿಗಳು, ಡಿವಿಡಿಗಳು, ಕ್ಯಾಸೇಟ್ಸ್ ಇತ್ಯಾದಿಗಳು | ಡೈಪರ್ಸ್, ಸಿರಂಜ್, ಬ್ಲೇಡ್, ಬಡ್ಸ್, ಬ್ಯಾಂಡೇಜ್‌ಗಳು, ನ್ಯಾಪ್‌ಕಿನ್ಸ್, ಥರ್ಮೋಮೀಟರ್, ಸಿರಿಂಜ್‌ಗಳು, ಅವಧಿ ಮುಗಿದ ಔಷಧಿಗಳು, ಪ್ರಾಣಿಗಳ ಮೂಳೆ ಇತ್ಯಾದಿಗಳು |

ಇನ್ನು ಮುಂದೆ ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಂಗಡಣೆಯನ್ನು ತೀವ್ರಗೊಳಿಸಲಾಗುವುದರಿಂದ ಸಾರ್ವಜನಿಕರು ಪಾಲಿಕೆಯೊಂದಿಗೆ ತ್ಯಾಜ್ಯ ವಿಂಗಡಣೆಯಲ್ಲಿ ಪಾಲ್ಗೊಂಡು ಹಸಿತ್ಯಾಜ್ಯವನ್ನು ಹಸಿರು ಬಿನ್‌ಗಳಲ್ಲಿ, ಒಣತ್ಯಾಜ್ಯವನ್ನು ನೀಲಿ ಬಿನ್‌ಗಳಲ್ಲಿ ಮತ್ತು ಹಾನಿಕಾರಕ ತ್ಯಾಜ್ಯವನ್ನು ಕೆಂಪು ಬಿನ್‌ಗಳಲ್ಲಿ ಶೇಖರಿಸುವಂತೆ ಕೋರಿದೆ. ಇಲ್ಲದಿದ್ದಲ್ಲಿ ಕೆ.ಎಂ.ಸಿ ಕಾಯ್ದೆ ತಿದ್ದುಪಡಿ ಮಸೂದೆ 2013ರನ್ವಯ ದಂಡ ವಿಧಿಸುವಿಕೆಯನ್ನು ಇನ್ನೂ ತೀವ್ರಗೊಳಿಸಲಾಗುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ